ಬೆಂಗಳೂರು ನಗರದಲ್ಲಿ ಇರುವ ಮಡಿವಾಳ ಮುಖ್ಯರಸ್ತೆ (ಹೊಸೂರು ರಸ್ತೆಗೆ ಸೇರುವವರೆಗೆ) ಯು ತುಂಬಾ ಹಾಳಾಗಿದ್ದು, ವಾಹನ ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ರಸ್ತೆ ಬೆಂಗಳೂರು ಮಹಾನಗರ ಪಾಲಿಕೆ ಮಿತಿಯೊಳಗೆ ಇದ್ದರೂ ಸಹಿತ ಇದರ ನಿರ್ವಹಣೆಯನ್ನು ಲೋಕೋಪಯೋಗಿ ಇಲಾಖೆ (ರಾಷ್ಟ್ರೀಯ ಹೆದ್ದಾರಿ ವಿಭಾಗ) ಇವರು ನೋಡಿಕೊಳ್ಳುತ್ತಿರುವರು. ಈ ರಸ್ತೆಯನ್ನು ಕೂಡಲೇ ದುರಸ್ತಿಗೊಳಿಸಲು ಲೋಕೋಪಯೋಗಿ ಇಲಾಖೆಗೆ ನಿರ್ದೇಶನ ನೀಡಲಾಗುವುದು.

ಎಂ. ಶ್ರೀನಿವಾಸ್ : ಅಲ್ಲಿಗೆ ತಮ್ಮನ್ನೇ ಕರೆದುಕೊಂಡು ಹೋಗಿದ್ದೇನೆ....

ಉಪಾಧ್ಯಕ್ಷರು : ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರಲ್ಲ.

ಶ್ರೀ ಎಂ. ಶ್ರೀನಿವಾಸ್ : ಒಂದು ನಿಮಿಷ ಉಪಾಧ್ಯಕ್ಷರೇ, ತಾವು ಹೇಳಿದ್ದೀರಿ, ಬಿ.ಡಿ.ಎ. ಇದೆ. ಕಾರ್ಪೋರೇಷನ್ ಇದೆ ಎಂದು ಹೇಳಿದ್ದೀರಿ. ತಮಗೆ ಗೊತ್ತಿದೆ. ಎರಡು ಸಾರಿ ಪತ್ರಿಕೆಯಲ್ಲಿ ದೊಡ್ಡದಾಗಿ ಫೋಟೋ ಸಹ ಬಂದಿದೆ. ಇದುವರೆಗೂ ರಿಪೇರಿ ಆಗಿಲ್ಲ, ತಮ್ಮನ್ನು ಕರೆದುಕೊಂಡು ಹೋಗಿ ಸುಮಾರು 3 ತಿಂಗಳು ಆಯಿತು, ಯಾವಾಗ ಮಾಡುತ್ತೀರಿ? ಲಿಖಿತವಾಗಿ ಹೇಳಿ. ಆ ರಸ್ತೆ ನೋಡಿ ತಾವು ಬೇಸರ ಬಿದ್ದಿದ್ದೀರಿ ಎಷ್ಟು, ಯಾವ ತಿಂಗಳು ಇಲ್ಲ ಒಂದು ವಾರದೊಳಗೆ ರಿಪೇರಿ ಮಾಡುತ್ತೀರಿ? ರಿಪೇರಿ ಮಾಡುವುದಕ್ಕೆ ತೆಗೆದುಕೊಳ್ಳಿ ಸ್ವಾಮಿ. ರಸ್ತೆಯನ್ನು ಮಾಡಲು ಟೆಂಡರ್ ಕರೆಯುತ್ತೀರಿ, ಮತ್ತೊಂದು ಆಮೇಲೆ ಮಾಡಿ. ರಿಪೇರಿಗೆ ಒಂದು ಡಬ್ಬ ಟಾರ್ ಇಲ್ಲವೇ. ಅದಕ್ಕೆ ನೀವು ಯಾವಾಗ ರಿಪೇರಿ ಮಾಡುತ್ತೀರಿ, ಅದನ್ನು ಹೇಳಿ.

(ಅ) ಬಂಟ್ವಾಳಕ್ಕೆ ಸಂಚಾರಿ ಪೋಲೀಸ್ ಠಾಣೆ.

ಶ್ರೀ ಬಿ. ರಮಾನಾಥ ರೈ (ಬಂಟ್ವಾಳ) : ಮಾನ್ಯ ಉಪಾಧ್ಯಕ್ಷರೇ, ಬಂಟ್ವಾಳ ನಗರ ಬೆಳೆಯುತ್ತಿರುವ ನಗರ ವಾಹನ ಸಂಚಾರ ಜಾಸ್ತಿಯಾಗಿ ವಾಹನ ನಿಯಂತ್ರಣ ಮಾಡುವುದು ಕಷ್ಟವಾಗಿದೆ. ಆದುದರಿಂದ ದಯಮಾಡಿ ಗೃಹ ಸಚಿವರು ಮುಂದಿನ ವಾರ್ಷಿಕ ಸಾಲಿನಲ್ಲಿ ಬಂಟ್ವಾಳಕ್ಕೆ ಸಂಚಾರಿ ಪೋಲೀಸ್ ಠಾಣೆ ತೆರೆಯುವ ಬಗ್ಗೆ ಗಮನ ಹರಿಸುವರೇ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) : ಮಾನ್ಯ ಉಪಾಧ್ಯಕ್ಷರೆ, 1995-96ನೇ ಸಾಲಿನಲ್ಲಿ 20 ಪೋಲೀಸ್ ಠಾಣೆಗಳನ್ನು ತೆರೆಯುವುದು ಸರ್ಕಾರದ ನೀತಿಯಾಗಿದೆ. ಇವುಗಳನ್ನು ಅವುಗಳ ಅಗತ್ಯತೆ ಹಾಗೂ ಆದ್ಯತೆಯನ್ನು ಆಧರಿಸಿ ಮಂಜೂರಾತಿ ನೀಡುವ ಬಗ್ಗೆ ಸರ್ಕಾರವು ಪರಿಶೀಲಿಸುತ್ತಿದೆ.

ಬಂಟ್ವಾಳ ನಗರದಲ್ಲಿ ಸಂಚಾರಿ ಪೋಲೀಸ್‌ಠಾಣೆಯ ಅವಶ್ಯಕತೆಯೂ ಸರಕಾರದ ಗಮನಕ್ಕೆ ಬಂದಿದೆ. ಆದ್ದರಿಂದ ಹೊಸ ಠಾಣೆಗಳನ್ನು ತೆರೆಯುವಾಗ ಇದನ್ನು ಪರಿಶೀಲನೆಗೆ ತೆಗೆದುಕೊಳ್ಳಲಾಗುವುದು.

ಈ ವಿಚಾರದಲ್ಲಿ ಮಾನ್ಯ ರಮಾನಾಥ ರೈ ಅವರು, ಹಿಂದಿನ ಗೃಹ ಮಂತ್ರಿಗಳು ಮತ್ತು ಇತರ ದಕ್ಷಿಣ ಕನ್ನಡ ಜಿಲ್ಲೆಯ ಶಾಸಕರು ನನ್ನ ಮೇಲೆ ಬಹಳ ಒತ್ತಾಯವನ್ನು ತಂದಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲೂ ಸಹಿತ ನಾನು ಮಾತನಾಡಿದ್ದೇನೆ. ಇದರ ಅವಶ್ಯಕತೆಯೂ ಇದೆ ಎಂದು ಹೇಳಿದ್ದಾರೆ. ಆದ್ದರಿಂದ ಈ ವಿಚಾರವನ್ನು ನಾನು ಬಹಳ ತೀವ್ರವಾಗಿ ಪರಿಶೀಲಿಸುತ್ತೇನೆ.